

## ನಿವೃತ್ತರ ತಂಗುದಾಣ!

ಕೆಲ ಬಸ್ ಸ್ಟಾಪ್‌ಗಳು ಬಸ್ಸು ಹಾಗೂ ಪ್ರಯಾಣಿಕರ ತಂಗುದಾಣ. ಪಯಣಿಗರ ವಿಶ್ರಾಂತಿ ಸ್ಥಳ ಎನ್ನಲೂಬಹುದು. ಬಸ್ ಬರುವವರೆಗೆ ನಿಂತು ಕಾಯುವ ಬದಲು ಕುಳಿತು ಕಾಯುವ ಇಂತಹ ಜಾಗಗಳು ಬೆಂಗಳೂರಿನಲ್ಲಿ ಸಾವಿರಾರಿವೆ. ಬಸ್ಸುಗಳೂ ನಿರಂತರವಾಗಿ ಬರುತ್ತಿದ್ದರೆ, ಪ್ರಯಾಣಿಕರಿಗೆ ಕೂರಲು ಸಮಯ ಇರುವುದಿಲ್ಲ. ಆದರೆ ನಿವೃತ್ತಿಯಾದ ಮಂದಿಯ ಹತ್ತಿರ ಬೇಕಾದಷ್ಟು ಸಮಯ ಇರುತ್ತದಲ್ಲ. ಅವರು ಈ ರೀತಿ ಜಾಗದ ಸದುಪಯೋಗ ಮಾಡಿಕೊಳ್ಳುತ್ತಾರೆ. ತಮ್ಮ ಕಷ್ಟ ಸುಖ ತೋಡಿಕೊಳ್ಳುತ್ತಾರೆ. ಅವರ ದಿನದ ಬಹುಪಾಲು ಸಮಯ ಇಲ್ಲಿಯೇ ಕಳೆಯುತ್ತಾರೆ. ಹೀಗೆ ಒಮ್ಮೆ ಹಿರಿಯರೆಲ್ಲರೂ ಒಂದು ಬಸ್ ನಿಲ್ದಾಣದಲ್ಲಿ ಕುಳಿತು ಹರಟೆ ಹೊಡೆಯುತ್ತಿರುವ ದೃಶ್ಯ ಇದು. ಇಂತಹ ಸ್ಥಳಗಳನ್ನು ನಿವೃತ್ತರ ತಂಗುದಾಣ ಎಂದು ಗುರುತಿಸಬಹುದೇನೋ? ಇದು ಬೆಂಗಳೂರಿನ ಎನ್. ಆರ್. ಕಾಲೊನಿಯಲ್ಲಿ ನಿತ್ಯ ನೋಡಬಹುದಾದ ದೃಶ್ಯ. ನಿಮ್ಮ ಬಸ್ಸು ಬರುವುದು ತಡವಾದರೆ ನೀವು ನಿಂತುಕೊಂಡೇ ಸ್ವಲ್ಪ ಅಡ್ಜಸ್ಟ್ ಮಾಡಿಕೋಬೇಕು ಅಷ್ಟೆ.

—ವಾ. ಮುರಳೀಧರ, ತೀರ್ಥಹಳ್ಳಿ



## ಅರ್ಧ ಶತಮಾನ ಕಂಡ ಆಟಿಕೆಗಳು

ನಮ್ಮ ತಾಯಿಯ ಮನೆಯಲ್ಲಿದ್ದ ಈ ವಸ್ತುಗಳನ್ನು ನಾವು ಚಿಕ್ಕವರಾಗಿದ್ದಾಗಿನಿಂದಲೂ ನೋಡುತ್ತಿದ್ದೆವು. ಬಾಲ್ಯದಲ್ಲಿ ಇವುಗಳೇ ನಮ್ಮ ಆಟದ ವಸ್ತುಗಳು. ಆಗೆಲ್ಲಾ ಪ್ಲಾಸ್ಟಿಕ್ಕಿನ ಆಟಿಕೆಗಳು ಬಳಕೆಗೆ ಬಂದಿರಲಿಲ್ಲ.

ಸುಮಾರು ಅರವತ್ತು ವರ್ಷಗಳ ಹಿಂದೆ ಇವನ್ನು ನಮ್ಮ ತಂದೆಯವರು ಕೊಂಡಿದ್ದರಂತೆ. ನಮ್ಮ ಅಕ್ಕಂದಿರು ಆಡಲು ತಂದಿದ್ದ ಈ ವಸ್ತುಗಳು ನಮ್ಮ ಕಾಲಕ್ಕೂ ಉಪಯೋಗಕ್ಕೆ ಬಂದವು. ನಮ್ಮ ಮಕ್ಕಳ ಕಾಲಕ್ಕಾಗಲೇ ಬೇರೆ ಬೇರೆ ರೀತಿಯ ಆಟದ ವಸ್ತುಗಳು ಬಂದಿದ್ದರಿಂದ ಇವುಗಳ ಬಳಕೆ ಕಡಿಮೆಯಾಯ್ತು. ನಂತರ ಇವು ಶೋಕೇಸನ್ನು ಸೇರಿಕೊಂಡವು.

ಮೊನ್ನೆ ಇವನ್ನು ನೋಡಿದಾಗ ಆ ದಿನಗಳು ನೆನಪಿಗೆ ಬಂದವು. ಎಲ್ಲವನ್ನೂ ಆಚೆ ತೆಗೆದು ತೊಳೆದಿಟ್ಟು ಫೋಟೊ ತೆಗೆದೆ. ಹಿತ್ತಾಳೆ ಮತ್ತು ತಾಮ್ರದ ವಸ್ತುಗಳಿವು. ಇವುಗಳಲ್ಲಿ ಪುಟ್ಟ ಪುಟ್ಟ ತಟ್ಟೆಗಳು, ರೈಲು ಚೊಂಬು, ಬೀಸುವ ಕಲ್ಲು, ಚಿಕ್ಕ ಲೋಟ, ಸ್ವಲ್ಪ ದೊಡ್ಡ ಹೂಜಿ, ಕುಂಕುಮದ ಭರಣಿ ಇತ್ಯಾದಿ ಇವೆ. ಗಾತ್ರದಲ್ಲಿ ಚಿಕ್ಕವಾದರೂ ಆಗ ಬಳಕೆಯಲ್ಲಿದ್ದ ಪಾತ್ರೆಗಳ ಎಲ್ಲಾ ಲಕ್ಷಣಗಳೂ ಇವುಗಳಲ್ಲಿವೆ. ನಮ್ಮ ಅಡುಗೆಯ ಆಟಕ್ಕೆ ಇವನ್ನು ಬಳಸಿದ ಸವಿನೆನಪು ಮತ್ತೆ ಮರುಕಳಿಸಿತು.

—ಬಿ.ಎಸ್. ರಾಜಲಕ್ಷ್ಮಿ, ಹಾಸನ